## ಸಂಘದ ಹೆಸರು : ಹೊಸಳ್ಳಿ ನೀ.ಬ.ಸ.ಸಂಘ

| ಕ್ರ. ಸಂ | ಆದಾಯದ ಮೂಲಗಳು | ವಿವರ | ಆದಾಯ (ರೂ.ಗಳಲ್ಲಿ) |
|---|---|---|---|
| 1 | ಸದಸ್ಯತ್ವ | ಒಟ್ಟು ಖಾತೆದಾರರು=596 – ಪ್ರತಿ ಖಾತೆದಾರರು ಕನಿಷ್ಠ ರೂ.115 ಸದಸ್ಯತ್ವ ನೀಡಿ ಷೇರುದಾರರಾದಾಗ ಸಂಗ್ರಹವಾಗುವ ಷೇರು ಹಣ ರೂ. 68,540. (ವಾರ್ಷಿಕ ಬಡ್ಡಿ ಶೇ 6.5ರಂತೆ ಸಂಘಕ್ಕೆ ಉಳಿಯುವ ಮೊತ್ತ ರೂ.4455) | 4,445 |
| 2 | ಏಕಕಾಲಿಕ ಕಾರ್ಯಾನುದಾನ | ಪ್ರತಿ ಹೆಕ್ಟೇರಿಗೆ ರೂ. 1,200 ದಂತೆ ಒಟ್ಟು 320.56 ಹೆಕ್ಟೇರಿಗೆ ಸಂಘಕ್ಕೆ ಸಿಗುವ ಮೊತ್ತ (ಇದರಲ್ಲಿ ಸಂಘದ ವಂತಿಗೆ (10%) ರೂ.38,467, ಕೇಂದ್ರ ಸರ್ಕಾರದ ಪಾಲು (45%) ರೂ.1,73,102 ಮತ್ತು ರಾಜ್ಯ ಸರ್ಕಾರದ ಪಾಲು (45%) ರೂ.1,73,102=ಒಟ್ಟು ರೂ. 3,84,672. (ವಾರ್ಷಿಕ ಬಡ್ಡಿ ಶೇ 6.5ರಂತೆ ಸಂಘಕ್ಕೆ ಉಳಿಯುವ ಮೊತ್ತ ರೂ.25,004) | 25,004 |
| 3 | ವಾರ್ಷಿಕ ನಿರ್ವಹಣೆ ಅನುದಾನ | 2021–22ರಲ್ಲಿ ಇದ್ದಂತೆ | 1,00,000 |
| 4 | ವಾರ್ಷಿಕ ನೀರಿನ ದರ ಸಂಗ್ರಹ | 320.56 ಹೆಕ್ಟೇರ್ ನಲ್ಲಿ ಸಂಪೂರ್ಣ ಭತ್ತ ಬೆಳೆದಿದ್ದು ಪ್ರತಿ ಬೆಳೆಗೆ ಪ್ರತಿ ಹೆಕ್ಟೇರಿಗೆ ರೂ.250ರಂತೆ ವರ್ಷಕ್ಕೆ ಎರಡು ಬೆಳೆಗೆ ರೈತರಿಂದ ಬರುವ ನೀರಿನ ದರ =320.56x2x250.00=1,60,280 ಈ ಮೊತ್ತದಲ್ಲಿ ನಿಗಮವು ನೀರಿನ ಬಳಕೆಗೆ ಘನ ಅಳತೆಯ ಆಧಾರದಲ್ಲಿ ನೀಡಿದ ಬಿಲ್ಲಿನ ಮೊತ್ತ ರೂ.80,640ರಲ್ಲಿ ಸಂಘದ ಆಡಳಿತ ವೆಚ್ಚ 20% ಮತ್ತು ನಿರ್ವಹಣಾ ವೆಚ್ಚ ಪ್ರತಿ ಹೆಕ್ಟೇರಿಗೆ ರೂ.40ನ್ನು ಬಿಲ್ಲಿನಲ್ಲಿ ಕಡಿತ ಮಾಡಿ ಉಳಿದ ಮೊತ್ತ ರೂ.38,868 ಅನ್ನು ನಿಗಮದ ಖಾತೆಗೆ ಜಮಾ ಮಾಡಿದಾಗ ಉಳಿಯುವ ಹಣ | 1,21,412 |
| | | **ಸಂಘಕ್ಕೆ ದೊರೆಯುವ ಒಟ್ಟು ಮೊತ್ತ** | **2,50,871** |

ಮೇಲಿನ ಕೋಷ್ಟಕವನ್ನು ಗಮನಿಸಿದರೆ ಹೊಸಳ್ಳಿ ಸಂಘಕ್ಕೆ ಒಟ್ಟು ರೂ. 2,50,871 ಆದಾಯ ದೊರೆಯುತ್ತದೆ. ಈ ಮೊತ್ತವನ್ನು ಆಡಳಿತಾತ್ಮಕ ವೆಚ್ಚಗಳು ಮತ್ತು ಕಾಲುವೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಬಳಸಬಹುದಾಗಿದೆ. ಎಲ್ಲಾ ಸಂಘಗಳು ತಮ್ಮ–ತಮ್ಮ ಸಂಘದ ವ್ಯಾಪ್ತಿಯ ಅಚ್ಚುಕಟ್ಟು, ಬೆಳೆ ಮತ್ತು ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಮೊತ್ತವನ್ನು ಲೆಕ್ಕ ಹಾಕಿಕೊಳ್ಳಬಹುದು. ಈ ಆದಾಯದ ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡರೆ ಸಂಘಗಳು ಸುಸ್ಥಿರವಾಗಿ ಮತ್ತು ಸ್ವಾವಲಂಬನೆಯಿಂದ ಮುನ್ನಡೆಯಲು ಸಾಧ್ಯ.

## ಸಂಘದ ಸಂಭವನೀಯ ಖರ್ಚು–ವೆಚ್ಚಗಳ ಮಾದರಿ

ಸಂಘಗಳಿಗೆ ಇರುವ ಆದಾಯ ಮೂಲಗಳ ಬಗ್ಗೆ ತಿಳಿದುಕೊಂಡೆವು. ಮುಂದಿನ ಕೋಷ್ಟಕದಲ್ಲಿ ಸಂಘಗಳ ಸಂಭವನೀಯ ವಾರ್ಷಿಕ ಖರ್ಚು–ವೆಚ್ಚಗಳ ಬಗ್ಗೆ ಒಂದು ಮಾದರಿಯಲ್ಲಿ ವಿವರಿಸಲಾಗಿದೆ.

| ಕ್ರ. ಸಂ. | ವಿವರ | ಮಾಸಿಕ (ರೂ.) | ವಾರ್ಷಿಕ (ರೂ.) |
|---|---|---|---|
| 1 | ಸಿ.ಇ.ಓ (ಕಾರ್ಯದರ್ಶಿ) ಗೌರವಧನ | 3,000 | 36,000 |
| 2 | ಮಾಸಿಕ ಸಭೆ ವೆಚ್ಚ | 200 | 2,400 |
| 3 | ವಾರ್ಷಿಕ ಮಹಾಸಭೆ ವೆಚ್ಚ | – | 1,500 |
| 4 | ಲೆಕ್ಕ ಪರಿಶೋಧನೆ ವೆಚ್ಚ | – | 2,500 |
| 5 | ಜೆರಾಕ್ಸ್, ಅಂಚೆ, ಕೊರಿಯರ್, ಇತ್ಯಾದಿ | 150 | 1,800 |
| 6 | ಸಾರಿಗೆ ವೆಚ್ಚ | 500 | 6,000 |
| 7 | ಲೆಡ್ಜರ್‌ಗಳು, ರಸೀದಿ ಪುಸ್ತಕ, ಇತ್ಯಾದಿ ಖರೀದಿ | – | 2,000 |
| 8 | ಮಡಿ/ಹೊಲಗಾಲುವೆ ನಿರ್ವಹಣೆ (ಅಂದಾಜು 30 ಕಿ.ಮೀ.,)* | – | 1,80,000 |
| | | ಒಟ್ಟು | 2,32,200 |

(*1 ಕಿ.ಮೀ.,ಗೆ 15 ಜನ ಲೇಬರ್‌ನಂತೆ 30 ಕಿ.ಮೀ.,ಗೆ 450 ಜನ ಬೇಕು. ಪ್ರತಿ ಲೇಬರ್ ಕೂಲಿ ರೂ. 400)

ಮೇಲಿನ ಕೋಷ್ಟಕದಲ್ಲಿ 8ನೇ ಅಂಶ–ಅಂದರೆ ಮಡಿ/ಹೊಲಗಾಲುವೆ ನಿರ್ವಹಣೆ ವೆಚ್ಚವು ಕಾಡಾ ಕಾಮಗಾರಿಗಳು ಅನುಷ್ಟಾನಗೊಂಡ ಮೊದಲ 3–4 ವರ್ಷಗಳಲ್ಲಿ ಇರುವುದಿಲ್ಲ. ಈ ಅವಧಿಯಲ್ಲಿ ಸಂಘಗಳು ತಮಗೆ ಬಂದ ಆದಾಯವನ್ನು ಉಳಿತಾಯ ಮಾಡಿ ನಂತರದ ವರ್ಷಗಳಲ್ಲಿ ಬಳಸಬಹುದು.

ಒಟ್ಟಾರೆ ಹೇಳಬೇಕೆಂದರೆ, ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆಯಲ್ಲಿ ನೀ.ಬ.ಸ.ಸಂ.ಗಳ ಪಾತ್ರ ಮಹತ್ವದ್ದಾಗಿದೆ. ಮೇಲೆ ವಿವರಿಸಿರುವ ಆದಾಯ ಮೂಲಗಳನ್ನು ಪಡೆಯುವ ಮತ್ತು ಬಳಸುವ ಬಗ್ಗೆ ಮಾರ್ಗದರ್ಶನ ಹಾಗೂ ತರಬೇತಿಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಇದರ ಪ್ರಯೋಜನವನ್ನು ಎಲ್ಲ ಸಂಘಗಳೂ ಪಡೆದುಕೊಂಡು ಸುಸ್ಥಿರವಾಗಿ ಮುನ್ನಡೆಯಬೇಕು.


**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

**ಕರ್ನಾಟಕ ನೀರಾವರಿ ನಿಗಮ ನಿ.**
ಯೋಜನಾ ಅನುಷ್ಟಾನ ಕಛೇರಿ, ಮುನಿರಾಬಾದ್, ಕೊಪ್ಪಳ–583233

**ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ**
ತುಂಗಭದ್ರಾ ಯೋಜನೆ, ಮುನಿರಾಬಾದ್, ಕೊಪ್ಪಳ–583233

**ಯೋಜನಾ ಸಹಾಯಕ ಸಮಾಲೋಚಕ ತಂಡ**
ಇಜಿಐಎಸ್, ನಂ 87, ಸೀತಾ ಕುಂಜ, 5ನೇ ಅಡ್ಡರಸ್ತೆ,
ಮೃತ್ಯುಂಜಯನಗರ, ಹೊಸಪೇಟೆ–583201, ವಿಜಯನಗರ ಜಿಲ್ಲೆ


ADB


egis India


ಶ್ರೀ ನಂಜುಂಡೇಶ್ವರ ಪ್ರಿಂಟರ್ಸ್, ಬೆಂಗಳೂರು–10


ಕರ್ನಾಟಕ ಸರ್ಕಾರ

# ಕರ್ನಾಟಕ ಸಮಗ್ರ ಮತ್ತು ಸುಸ್ಥಿರ ಜಲ ಸಂಪನ್ಮೂಲ ನಿರ್ವಹಣೆ ಹೂಡಿಕೆ ಕಾರ್ಯಕ್ರಮ

## ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆ



## ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಆದಾಯದ ಮೂಲಗಳು

## ಹಿನ್ನೆಲೆ

ನೀರು ಬಳಕೆದಾರರ ಸಹಕಾರ ಸಂಘಗಳು (ನೀ.ಬ.ಸ.ಸಂ.) ಕಾಲ–ಕಾಲಕ್ಕೆ ಕಾಲುವೆ ನಿರ್ವಹಣೆ ಮಾಡಲು ಹಾಗೂ ಆಡಳಿತಾತ್ಮಕ ವೆಚ್ಚಗಳಿಗಾಗಿ ಆದಾಯದ ಮೂಲಗಳು ಅವಶ್ಯಕ. ಇದನ್ನು ಮನಗಂಡು ಸರ್ಕಾರವು ಹಲವು ಅವಕಾಶಗಳನ್ನು ಒದಗಿಸಿದೆ. ಅವುಗಳಲ್ಲಿ ಏಕಕಾಲಿಕ ಕಾರ್ಯಾನುದಾನ, ವಾರ್ಷಿಕ ಕಾಲುವೆ ನಿರ್ವಹಣಾ ಅನುದಾನ ಹಾಗೂ ನೀರಿನ ದರ ಸಂಗ್ರಹ ಮತ್ತು ಅದರ ಬಳಕೆಯು ಪ್ರಮುಖವಾಗಿರುತ್ತವೆ. ಇವುಗಳನ್ನು ಪಡೆಯುವ ವಿಧಾನ ಹಾಗೂ ಬಳಕೆಯ ಬಗ್ಗೆ ಇಲ್ಲಿ ವಿವರಿಸಲಾಗಿದೆ.

## ಏಕಕಾಲಿಕ ಕಾರ್ಯಾನುದಾನ (ಒನ್‌ಟೈಮ್ ಫಂಕ್ಷನಲ್ ಗ್ರ್ಯಾಂಟ್)

ಕಾಡಾ ಮೂಲಕ ದೊರೆಯುವ ಏಕಕಾಲಿಕ ಕಾರ್ಯಾನುದಾನ ನೀ.ಬ.ಸ.ಸಂ.ಗಳಿಗೆ ಒಂದು ಮುಖ್ಯ ಆದಾಯದ ಮೂಲವಾಗಿದೆ. ಈ ಮೊತ್ತವು ಪ್ರತಿ ಹೆಕ್ಟೇರಿಗೆ ಒಟ್ಟು ರೂ. 1,200 ಇದ್ದು ಇದರಲ್ಲಿ ಕೇಂದ್ರ ಸರ್ಕಾರ 45% (ರೂ.540) ಮತ್ತು ರಾಜ್ಯ ಸರ್ಕಾರ 45% (ರೂ.540) ನೀಡುತ್ತವೆ. ಉಳಿದ 10% (ರೂ.120) ಮೊತ್ತವನ್ನು ರೈತರು ವಂತಿಗೆಯಾಗಿ ಸಂಘಕ್ಕೆ ನೀಡಬೇಕು. ರೈತರಿಂದ ಹೆಕ್ಟೇರುವಾರು ವಂತಿಗೆ ಸಂಗ್ರಹಿಸಿದ ದಾಖಲೆಗಳನ್ನು ಕಾಡಾಗೆ ಸಲ್ಲಿಸಿದ ನಂತರ ಆ ವಂತಿಗೆ ಹಣಕ್ಕೆ ಹೊಂದಾಣಿಕೆ ಅನುದಾನ (ಮ್ಯಾಚಿಂಗ್ ಗ್ರಾಂಟ್) ವನ್ನು ಕಾಡಾ ಒದಗಿಸುವುದು. ಒಟ್ಟು ಮೊತ್ತವನ್ನು ಕಾಡಾ ಹಾಗೂ ಸಂಘದ ಹೆಸರಿನಲ್ಲಿ ನಿಗದಿತ ಠೇವಣಿ (ಎಫ್.ಡಿ.) ಇಟ್ಟು ಇದರಿಂದ ಬರುವ ಬಡ್ಡಿ ಹಣವನ್ನು ಸಂಘವು ಆಡಳಿತಾತ್ಮಕ ಮೊತ್ತಗಳಿಗೆ ಬಳಸಿಕೊಳ್ಳಬಹುದಾಗಿದೆ.

## ವಾರ್ಷಿಕ ಕಾಲುವೆ ನಿರ್ವಹಣೆ ಅನುದಾನ

ನೀ.ಬ.ಸ.ಸಂ.ಗಳಿಗೆ ಕಾಡಾ ಮೂಲಕ ಒಂದು ಲಕ್ಷ ರೂ. ವಾರ್ಷಿಕ ನಿರ್ವಹಣೆ ಅನುದಾನ ದೊರೆಯುತ್ತದೆ. ಇದನ್ನು ಪಡೆಯಲು ಆಯಾ ವರ್ಷದ ಲೆಕ್ಕ ಪರಿಶೋಧನೆ ವರದಿ, ವಾರ್ಷಿಕ ಮಹಾಸಭೆ ವರದಿ ಮತ್ತು ನೀರಿನ ದರ ಸಂಗ್ರಹಣೆ ಮಾಡಿದ ದಾಖಲೆಗಳೊಂದಿಗೆ ವರ್ಷದ ಅಕ್ಟೋಬರ್–ನವೆಂಬರ್ ತಿಂಗಳಲ್ಲಿ ಕಾಡಾಗೆ ಮನವಿ ಸಲ್ಲಿಸಬೇಕು.

## ನೀರಿನ ದರ ಸಂಗ್ರಹ

ಪ್ರತಿ ನೀ.ಬ.ಸ.ಸಂ.ವು ನೀರಾವರಿ ನಿಗಮದೊಂದಿಗೆ 5 ವರ್ಷಗಳ ಅವಧಿಗೆ ನೀರು ನಿರ್ವಹಣೆ ಹಸ್ತಾಂತರ ಒಪ್ಪಂದವನ್ನು ಮಾಡಿಕೊಂಡ ನಂತರ ನೀರಿನ ದರ ಸಂಗ್ರಹ ಮಾಡುವ ಅಧಿಕಾರ ದೊರೆಯುತ್ತದೆ. ಇದು ಸಂಘಗಳಿಗೆ ಪ್ರಮುಖ ಆದಾಯದ ಮೂಲವಾಗಿದೆ. ನೀರಿನ ದರ ವಸೂಲಿ ಮಾಡಲು ಒಂದು ನಿರ್ದಿಷ್ಟ ಪ್ರಕ್ರಿಯೆಯನ್ನು ಅನುಸರಿಸಬೇಕು. ಇಲ್ಲಿ ಆ ಪ್ರಕ್ರಿಯೆಗಳ ಬಗ್ಗೆ ವಿವರಿಸಲಾಗಿದೆ;

- ಪ್ರತಿ ಹಂಗಾಮಿನಲ್ಲಿ ಬೆಳೆ ಕಟಾವಿನ ನಂತರ ಘನ ಅಳತೆ ಆಧಾರದ ಮೇಲೆ ನೀರಿನ ಬಿಲ್ಲನ್ನು ಆಯಾ ನೀರಾವರಿ ನಿಗಮದ ಕಾರ್ಯಪಾಲಕ ಇಂಜಿನಿಯರ್‌ರವರು ತಮ್ಮ ವ್ಯಾಪ್ತಿಯ ಸಂಘಗಳಿಗೆ ನೀಡುವರು.
- ತನ್ನ ವ್ಯಾಪ್ತಿಯ ಅಚ್ಚುಕಟ್ಟು ಪ್ರದೇಶದ ರೈತರಿಂದ ಬೆಳೆ ಆಧಾರದ ಮೇಲೆ ಸರ್ಕಾರ ನಿಗದಿ ಪಡಿಸಿದ ದರ ಅಥವಾ ಅದಕ್ಕಿಂತ ಹೆಚ್ಚು ದರವನ್ನು ಸಂಗ್ರಹ ಮಾಡುವ ಅಧಿಕಾರ ಸಂಘಕ್ಕೆ ಇದೆ.
- ನಿಗಮವು ಸಂಘಕ್ಕೆ ಬಿಲ್ ನೀಡುವ ಮತ್ತು ಸಂಘವು ಸರ್ಕಾರಕ್ಕೆ ಹಣ ಪಾವತಿಸಲು ವರ್ಷದಲ್ಲಿ ನಿರ್ದಿಷ್ಟ ದಿನಾಂಕಗಳಿವೆ; ಅಂದರೆ ನಿಗಮವು ನೀ.ಬ.ಸ.ಸಂ.ಗಳಿಗೆ ಮುಂಗಾರಿನಲ್ಲಿ 30ನೇ ನವೆಂಬರ್ ಮತ್ತು ಹಿಂಗಾರಿನಲ್ಲಿ 31ನೇ ಮಾರ್ಚ್ ಒಳಗಾಗಿ ನೀರಿನ ಬಿಲ್ ಕಳುಹಿಸುತ್ತದೆ. ಈ ಬಿಲ್ ಅನ್ನು





ಪಡೆದ ನೀ.ಬ.ಸ.ಸಂ.ಗಳು ರೈತರಿಂದ ನೀರಿನ ದರ ವಸೂಲಿ ಮಾಡಿ ಸರ್ಕಾರಕ್ಕೆ ಸಂದಾಯ ಮಾಡಲು ಮುಂಗಾರಿನಲ್ಲಿ 1ನೇ ಮಾರ್ಚ್ ಹಾಗೂ ಹಿಂಗಾರಿನಲ್ಲಿ 1ನೇ ಜುಲೈ ಕಡೇ ದಿನಾಂಕಗಳಾಗಿರುತ್ತವೆ.

- ನೀರಿನ ಬಿಲ್ ಮೊತ್ತದಲ್ಲಿ 20% ಆಡಳಿತಾತ್ಮಕ ವೆಚ್ಚಕ್ಕೆ ಮತ್ತು ಒಂದು ಹೆಕ್ಟೇರಿಗೆ ರೂ.40ರಂತೆ ನಿರ್ವಹಣಾ ವೆಚ್ಚವನ್ನು ಒಟ್ಟು ಅಚ್ಚುಕಟ್ಟು ಪ್ರದೇಶಕ್ಕೆ ಲೆಕ್ಕಹಾಕಿ ಸದರಿ ಮೊತ್ತವನ್ನು ಬಿಲ್ ಮೊತ್ತದಿಂದ ಕಡಿತಗೊಳಿಸಿಕೊಂಡು ಉಳಿದ ಹಣವನ್ನು ನಿಗಮದ ಖಾತೆಗೆ ಜಮಾ ಮಾಡಬೇಕು. ನಿಯಮದ ಪ್ರಕಾರ ಒಪ್ಪಂದ ಪತ್ರದಲ್ಲಿ ಸೂಚಿಸಿರುವ ದಿನಾಂಕಗಳಿಗಿಂತ ಮುಂಚಿತವಾಗಿ ಸಂಘವು ಸರ್ಕಾರಕ್ಕೆ ನೀರಿನ ದರ ಪಾವತಿಸಿದರೆ 2% ರಿಯಾಯ್ತಿ ನೀಡಲಾಗುತ್ತದೆ. ಒಂದು ವೇಳೆ ಸೂಚಿಸಿದ ದಿನಾಂಕಕ್ಕಿಂತ ತಡವಾಗಿ ಪಾವತಿಸಿದರೆ ಮಾಸಿಕ 1.5% ರಂತೆ ಬಡ್ಡಿ ಸಂದಾಯ ಮಾಡಬೇಕಾಗುತ್ತದೆ.

## ನೀರಿನ ದರ ಸಂಗ್ರಹ ಮಾಡಲು ಸಂಘಗಳು ಅನುಸರಿಸಬೇಕಾದ ಕ್ರಮಗಳು

- ನೀರು ನಿರ್ವಹಣಾ ಹಸ್ತಾಂತರ ಒಪ್ಪಂದ (ಎಂ.ಓ.ಯು) ಆದ ಬಳಿಕ ನೀ.ಬ.ಸ.ಸಂ.ದಲ್ಲಿ ನೀರಿನ ದರ ಸಂಗ್ರಹದ ಬಗ್ಗೆ ಚರ್ಚಿಸಿ, ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆಯನ್ನು ಪಡೆಯಬೇಕು.
- ನೀರಿನ ದರ ಸಂಗ್ರಹದ ಮಹತ್ವದ ಬಗ್ಗೆ ಅಚ್ಚುಕಟ್ಟುದಾರರಿಗೆ ಡಂಗುರ ಸಾರಿಸುವುದು, ಗ್ರಾಮಸಭೆ ಮಾಡುವುದು, ಕರಪತ್ರ, ಜಾಥಾ, ಬೀದಿನಾಟಕ ಅಥವಾ ಗೋಡೆ ಬರಹದ ಮೂಲಕ ತಿಳುವಳಿಕೆ ನೀಡುವುದು;
- ಕಂದಾಯ ಅಧಿಕಾರಿಗಳಿಗೆ ಮತ್ತು ಗ್ರಾಮ ಲೆಕ್ಕಿಗರಿಗೆ ನೀರಿನ ದರ ಸಂಗ್ರಹಣೆಯಲ್ಲಿ ನೀ.ಬ.ಸ.ಸಂ.ಗಳಿಗೆ ಅಧಿಕಾರ ಇರುವ ಬಗ್ಗೆ ತಿಳುವಳಿಕೆ ಮೂಡಿಸುವುದು.
- ರೈತರಿಗೆ ಸಂಘದ ಮೂಲಕ ತಗಾದೆ (ಡಿಮ್ಯಾಂಡ್ ನೋಟೀಸ್) ಪತ್ರಗಳನ್ನು ನೀಡುವುದು.
- ರೈತರಿಂದ ದರ ಸಂಗ್ರಹಿಸುವಾಗ ಸಂಘವು ಸೇವಾ ಶುಲ್ಕವನ್ನು ತಾವೇ ನಿಗದಿಪಡಿಸಿ ಪಡೆಯುವುದು.



### ಜಲಾಶಯದ ಮೂಲಕ ನೀರನ್ನು ಪಡೆಯುವ ಬೆಳೆಗಳಿಗೆ ಪ್ರತಿ ಬೆಳೆಗೆ ಸರ್ಕಾರ ನಿಗದಿಪಡಿಸಿರುವ ನೀರಿನ ದರ (ವಿ.ಎನ್.ಸಿ. ವ್ಯಾಪ್ತಿಯ ಸಂಘಗಳಿಗೆ ಈ ದರಗಳು ಅನ್ವಯವಾಗುತ್ತದೆ)

| ಕ್ರ. ಸಂ. | ಬೆಳೆ | ನೀರಿನ ದರ (ಪ್ರತಿ ಹೆಕ್ಟೇರಿಗೆ ರೂ.) | ನೀರಿನ ದರ (ಪ್ರತಿ ಎಕರೆಗೆ ರೂ.) |
|---|---|---|---|
| 1 | ಕಬ್ಬು | 988.40 | 400 |
| 2 | ಭತ್ತ | 247.10 | 100 |
| 3 | ಹತ್ತಿ | 148.25 | 60 |
| 4 | ತೋಟಗಾರಿಕೆ ಬೆಳೆಗಳು | 148.25 | 60 |
| 5 | ಜೋಳ, ರಾಗಿ, ನವಣೆ ಮತ್ತು ಅರೆ ಖುಷ್ಕಿ ಬೆಳೆಗಳು | 86.50 | 35 |
| 6 | ಧಾನ್ಯಗಳು | 86.50 | 35 |
| 7 | ಗೊಬ್ಬರದ ಬೆಳೆಗಳು | 37.05 | 15 |
| 8 | ಇತರೆ | 86.50 | 35 |

### ನದಿ ಮತ್ತು ಹೊಳೆಗಳಿಂದ ನೇರವಾಗಿ ನೀರನ್ನು ಪಡೆಯುವ ಬೆಳೆಗಳಿಗೆ ಪ್ರತಿ ಬೆಳೆಗೆ ಸರ್ಕಾರ ನಿಗದಿಪಡಿಸಿರುವ ನೀರಿನ ದರ

| ಕ್ರ. ಸಂ. | ಬೆಳೆ | ನೀರಿನ ದರ (ಪ್ರತಿ ಹೆಕ್ಟೇರಿಗೆ, ರೂ.) | ನೀರಿನ ದರ (ಪ್ರತಿ ಎಕರೆಗೆ, ರೂ.) |
|---|---|---|---|
| 1 | ಕಬ್ಬು | 308.90 | 125 |
| 2 | ಭತ್ತ | 185.30 | 75 |
| 3 | ಇತರೆ ಬೆಳೆ | 61.80 | 25 |



ಹೀಗೆ ಏಕಕಾಲಿಕ ಕಾರ್ಯಾನುದಾನ, ವಾರ್ಷಿಕ ನಿರ್ವಹಣೆ ಅನುದಾನ ಹಾಗೂ ನೀರಿನ ದರ ಸಂಗ್ರಹಣೆ ಜೊತೆಗೆ ಸದಸ್ಯತ್ವ ಷೇರು ಹಣ ವಸೂಲಿ, ದಾನಿಗಳಿಂದ ವಂತಿಗೆ, ಗ್ರಾಮ ಪಂಚಾಯ್ತಿ ಮೂಲಕ ನರೇಗಾ ಅನುದಾನ ಪಡೆಯುವುದು ಇತ್ಯಾದಿ ಇನ್ನೂ ಹಲವು ಆದಾಯದ ಮೂಲಗಳಿವೆ.

## ಸಂಘದ ಆದಾಯ ಮೂಲಗಳ ಮಾದರಿ ಚಿತ್ರಣ



ಮೇಲೆ ವಿವರಿಸಿದ ಎಲ್ಲಾ ಆದಾಯದ ಮೂಲಗಳನ್ನು ಪರಿಪೂರ್ಣವಾಗಿ ಒಂದು ಸಂಘವು ಪಡೆದುಕೊಂಡರೆ ದೊರೆಯಬಹುದಾದ ಒಟ್ಟು ಆದಾಯ ಮತ್ತು ವಾರ್ಷಿಕ ಬಡ್ಡಿ ಮೊತ್ತವನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ. ವಿ.ಎನ್.ಸಿ ವ್ಯಾಪ್ತಿಯ ಹೊಸಳ್ಳಿ ನೀ.ಬ.ಸ.ಸಂ.ವನ್ನು ಉದಾಹರಣೆಯಾಗಿ ಇಟ್ಟುಕೊಂಡು ಆದಾಯ ಮೂಲಗಳು ಮತ್ತು ಮೊತ್ತವನ್ನು ಲೆಕ್ಕ ಹಾಕಲಾಗಿದೆ.